ಹಿಂದೆ ತನ್ನನ್ನು 'ಹನಿ' ಎಂದು ಸಂಬೋಧಿಸಿದಾಗ ಕೆರಳಿದ್ದವಳಿಗೆ ಬೆಣ್ಣೆ ಸವರುವ ಮಾತುಗಳೇ ಇವು.

'ಚಂದ್ರನಲ್ಲಿಗೆ ಹೋಗುವ ಮುನ್ನ ಪ್ರತಿ ದೇಶದಿಂದಲೂ ಸಂಚಾರ ವಿಭಾಗದ ಕೆಲ ಅಧಿಕಾರಿ ಸಿಬ್ಬಂದಿಗಳನ್ನು ಸಂಚಾರ ನಿರ್ವಹಣೆಗೆ ಆಯ್ಕೆ ಮಾಡಿ ಕಳುಹಿಸಲಾಗುತ್ತದೆ. ಆ ಪಟ್ಟಿಯಲ್ಲಿ ನಮ್ಮ ಹೆಸರಿದ್ದರೆ ಏನು ಮಾಡ್ತೀರಿ? ಅದಕ್ಕೆ ಪೂರ್ವ ಸಮ್ಮತಿಯನ್ನು ಪಡೆದೇ ಆಯ್ಕೆ ಪಟ್ಟಿ ಪ್ರಕಟಿಸುವರಲ್ಲ. ಈ ಕರ್ತವ್ಯದ ಜಂಜಾಟದ ನಡುವೆ ಕೊಂಚ ಬಿಡುವು ಮಾಡಿಕೊಂಡು ನಾವೂ ಪ್ರವಾಸಿಗರಂತೆ ಹೋಗಿ ಬರುವುದಕ್ಕೆ ನನ್ನ ಒಪ್ಪಿಗೆ ಇದೆ.'

'ನೀವು ತುಂಬಾನೇ ಯೋಜನೆಗಳನ್ನು ಹಾಕಿಕೊಂಡಿರುವಂತಿದೆ. ಈ ಯೋಜನೆಗಳಲ್ಲಿ ನನಗೆ ಸಮಪಾಲು ನೀಡಿರುವುದು ನಿಮ್ಮ ತಂದೆ ತಾಯಿಗೆ ತಿಳಿದಿದೆಯೇ...?'

'ಹನಿ, ಅವರಿಗೆ ವಿಶ್ವ ಪರ್ಯಟನೆಗೆ ಅವಕಾಶ ಮಾಡಿಕೊಟ್ಟಿರುವುದರಿಂದ ಅವರ ಮಗನಾದ ನಾನು ಅದಕ್ಕಿಂತಲೂ ಅತ್ಯದ್ಭುತ ಸುವರ್ಣ ಅವಕಾಶ ಬಾಚಿಕೊಳ್ಳುವೆನೆಂದರೆ ಅವರಿಂದ ಆಕ್ಷೇಪ ಹೇಗೆ ಬರಲು ಸಾಧ್ಯ...' ಎಂದು ಜಾಣ್ಮೆಯಿಂದ ಉತ್ತರಿಸಿದ್ದ.

'ಅಂತೂ ನನ್ನ ಬಾಯಿಂದ ಒಪ್ಪಿಗೆಯ ನುಡಿಗಳು ಬರುವ ಮುನ್ನವೇ ಎಲ್ಲಾ ತಯಾರಿ ನಡೆದಿದೆ...' ಅವನ ಮುಂದಾಲೋಚನೆಗೆ ಬೆರಗಾಗಿ ನುಡಿದಳು.

ಅವರು ಆಗ ಮನೆಯ ನಾಲ್ಕು ಅಂತಸ್ತಿನ ತಾರಸಿಯ ಮೇಲೆ ಸಲ್ಲಾಪದಲ್ಲಿ ತೊಡಗಿದ್ದಾಗ ಅವರು ಕುಳಿತಿದ್ದ ಮೇಜಿನ ಬದಿಯ ವಿಡಿಯೊ ವಾಲ್‌ನಲ್ಲಿ ವಿದ್ಯಮಾನಗಳು ಸದ್ದಿಲ್ಲದೆ ಪ್ರಸಾರವಾಗುತ್ತಿದ್ದವು.

ಅರೆಮಾನವ ಪಡೆಯ ಸದಸ್ಯರ ನೇಮಕಾತಿಯ ಬಳಿಕ ಹೊಚ್ಚ ಹೊಸದಾಗಿ ಚಂದ್ರನೆಡೆಗೆ ಪ್ರವಾಸದ ವಿಷಯ ವಿಶ್ವದಾದ್ಯಂತ ದೊಡ್ಡ ಸುದ್ದಿಯಾಗಿ ಪ್ರಸಾರವಾಗುತ್ತಿತ್ತು. ಈಗಾಗಲೇ ವಿವಿಧ ದೇಶಗಳಿಂದ ಆಗಿರುವ ಆನ್‌ಲೈನ್ ಬುಕ್ಕಿಂಗ್ ಹಾಗೂ ಅದರ ನಂತರದ ತಯಾರಿಯ ಇಣುಕುನೋಟ ಸಾಹಸ ಬಯಸುವ ಯುವಜನರನ್ನು ಪ್ರಭಾವಿತಗೊಳಿಸುತ್ತಿತ್ತು.

'ನಾನು ನನ್ನ ಜೀವನದಲ್ಲಿ ಮರೆಯಲಾಗದ ಪ್ರವಾಸಿ ಅನುಭವಕ್ಕಾದರೂ ನಿನ್ನನ್ನು ವರಿಸಲು ಒಪ್ಪಿಗೆ ನೀಡುತ್ತಿದ್ದೇನೆ' ಎಂದಾಗ ಅವಿರತ್ ಕಕ್ಕಾಬಿಕ್ಕಿಯಾಗಿದ್ದ. ಬಹುಶಃ ತನ್ನ ಸಾಂಗತ್ಯವನ್ನು ಅಪೇಕ್ಷಿಸುತ್ತಾ ತನ್ನ ಜೊತೆಗಾರ್ತಿಯಾಗಲು ಒಪ್ಪುವಳೆಂದು ನಿರೀಕ್ಷಿಸಿದ್ದವನಿಗೆ ಇದು ಇರಿಸುಮುರಿಸು ತರಿಸಿತ್ತು. ತಾನು ತನ್ನ ವಿವಾಹಕ್ಕಿಂತ ತನ್ನ ಯೋಜನೆಗಳ ಕಡೆ ಹೆಚ್ಚು ಒತ್ತು ನೀಡಿದ್ದು ಅವನಿಗೆ ತಿರುಗೇಟು ನೀಡಿತ್ತು!

ಅವನ ಕಳೆಗುಂದಿದ ಮುಖವನ್ನು ನೋಡಿದಾಗ ಹನ್ನಾ ಕೂಡಲೇ ಕಾರಣ ಅರಿತ್ತಿದ್ದಳಾದರೂ, ಬಿಂಕವನ್ನು ಪ್ರದರ್ಶಿಸುತ್ತಾ ಕೆಣಕಿದಳು.

'ನನಗೆ ಈ ನೆಲದ ಮೇಲೆಯೇ ಹಿರಿಯರ ಸಮ್ಮುಖದಲ್ಲಿ ಮದುವೆಯಾಗುವ ಆಸೆ. ಈ ವಿಚಾರವಾಗಿ ನಾನು ನನ್ನ ಮಾಮ್‌ನ ಅಭಿಪ್ರಾಯ ಕೇಳುವುದನ್ನು ಮರೆತಿದ್ದೆ'.

ರೊಬೋ ಮಾಮ್‌ಗೆ ಸಂಪರ್ಕಿಸಿ ಒಂದು ಮಾತು ಕೇಳಿಯೇ ಬಿಡೋಣವೆಂದಾಗ ಅವಿರತ್ ತನ್ನ ರೊಬೋ ಮರಿ ಸುಪ್ರಜಾಗೆ ಕೈ ಸನ್ನೆ ಮಾಡಿ ಕರೆದ. ಅದು ಕೂಡಲೇ ಹತ್ತಿರ ಬಂದಿತ್ತು.

'ಅವಿರತ್, ಮಾತಾಡುತ್ತಾ ಸಮಯ ಕಳೆದುಬಿಟ್ಟಿರಿ. ಕೊಂಚ ಏನಾದರೂ ತಿನಿಸು ಸೇವಿಸಿರಿ' ಎಂದು ಅವರ ಮೇಜಿನ ಮೇಲೆ ವಿವಿಧ ಅಲಂಕಾರಿಕ ಮಾದರಿಗಳಲ್ಲಿ ತಿನಿಸುಗಳನ್ನು ಹರಡಿತು.

'ಅದಿರಲಿ ಸುಪ್ರಜಾ. ಹನ್ನಾ ಈ ಮನೆಗೆ ಸೊಸೆಯಾಗಿ ಬರುವುದರ ಬಗ್ಗೆ ನಿಮ್ಮ ಅಭಿಪ್ರಾಯವೇನು?'

'ನೀವಿಬ್ಬರೂ ಅನ್ಯೋನ್ಯ ಜೋಡಿ ಎಂಬುದರಲ್ಲಿ ಸಂಶಯವೇ ಇಲ್ಲ. ಇನ್ನು ಹನ್ನಾ ಸೊಸೆಯಾಗಿ ಬಂದ ಮೇಲೆ ನನ್ನ ಕೆಲಸಕ್ಕೆ ಹೆಚ್ಚುವರಿ ಹೊರೆ ಬೀಳಬಹುದಾದರೂ ನನಗೆ ಪ್ರೋಗ್ರಾಮಿಂಗ್ ಮಾಡಿದರೆ ನಾನು ಆ ಕೆಲಸಗಳನ್ನೆಲ್ಲ ನಿಭಾಯಿಸಬಲ್ಲೆ.'

ಅತ್ತ ಹನ್ನಾಳ ಸಂಪರ್ಕಕ್ಕೆ ಸಿಕ್ಕ ರೊಬೋ ಮಾಮ್ ಅಲಕಾದೇವಿ, ಯಾವುದೋ ಆದೇಶದ ನಿರೀಕ್ಷೆಯಲ್ಲಿ ಪ್ರಶ್ನಿಸಿತು, 'ಏನು ಕೆಲಸವಾಗಬೇಕಿದೆ ಹನ್ನಾ?'

'ಕೆಲಸವೇನೂ ಇಲ್ಲ ಮಾಮ್. ಅವಿರತ್ ನಿನ್ನ ಅಳಿಯನಾದರೆ ಹೇಗಿರುತ್ತೆ?'

'ಅವಿರತ್... ಓ... ಕೆಲವು ದಿನಗಳ ಹಿಂದೆ ಮನೆಗೆ ಬಂದಿದ್ದನಲ್ಲವೇ... ವೆರಿ ನೈಸ್ ಜಂಟಲ್‌ಮ್ಯಾನ್. ಆದರೆ ನಿನ್ನ ವಿವಾಹದ ಬಳಿಕ ನಾನಿಲ್ಲಿ ಒಬ್ಬಂಟಿಯಾಗುವೆನಲ್ಲ ಹನ್ನಾ. ನನ್ನ ಪವರ್ ಶಟ್‌ಡೌನ್ ಮಾಡಿ ವಾಪಸ್ಸು ವರ್ಕ್‌ಶಾಪ್‌ಗೆ ಬಿಡುವೆಯಾ?'. ಅಲಕಾದೇವಿ ಧ್ವನಿಯಲ್ಲಿ ದೈನ್ಯತೆಯಿತ್ತು.

ಹನ್ನಾಳಿಗೆ ಈ ವಿಚಾರವೇ ಹೊಳೆದಿರದೆ ಅಲಕಾದೇವಿಯನ್ನು ಅಗಲುವ ವಿಚಾರ ನೋವು ತರಿಸಿತ್ತು.

'ಇಲ್ಲಾ ಮಾಮ್. ನಿನ್ನನ್ನು ವರ್ಕ್‌ಶಾಪ್‌ಗೆ ಬಿಡುವುದಿಲ್ಲ. ನನ್ನೊಂದಿಗೆ ನೀನೂ ಅವಿರತ್ ಮನೆಯಲ್ಲಿರಬಹುದು. ಇಲ್ಲಿ ನಿನ್ನಂತೆಯೇ ಅವಿರತ್‌ನ ರೊಬೋಮರಿ ಇದೆ. ಇಬ್ಬರೂ ಹೊಂದಾಣಿಕೆಯಿಂದ ಕಾರ್ಯ ನಿರ್ವಹಿಸುವಂತೆ ಪ್ರೋಗ್ರಾಮಿಂಗ್ ಮಾಡಿದರಾಯಿತು'.

'ಹಾಗೇನು. ನನಗೂ ಒಬ್ಬರು ಜೊತೆಗಾರರು ಸಿಗುತ್ತಾರೆ ಎಂದಾಯ್ತು' ಅಲಕಾದೇವಿಯ ಖುಷಿಯ ಧ್ವನಿಗೆ ಹನ್ನಾಳ ಮುಖದಲ್ಲಿ ಮಂದಹಾಸ ಮೂಡಿತ್ತು.

ಅವರು ಆಗ ಮನೆಯ ನಾಲ್ಕು ಅಂತಸ್ತಿನ ತಾರಸಿಯ ಮೇಲೆ ಸಲ್ಲಾಪದಲ್ಲಿ ತೊಡಗಿದ್ದಾಗ ಅವರು ಕುಳಿತಿದ್ದ ಮೇಜಿನ ಬದಿಯ ವಿಡಿಯೊ ವಾಲ್‌ನಲ್ಲಿ ವಿದ್ಯಮಾನಗಳು ಸದ್ದಿಲ್ಲದೆ ಪ್ರಸಾರವಾಗುತ್ತಿದ್ದವು. ಅರೆಮಾನವ ಪಡೆಯ ಸದಸ್ಯರ ನೇಮಕಾತಿಯ ಬಳಿಕ ಹೊಚ್ಚ ಹೊಸದಾಗಿ ಚಂದ್ರನೆಡೆಗೆ ಪ್ರವಾಸದ ವಿಷಯ ವಿಶ್ವದಾದ್ಯಂತ ದೊಡ್ಡ ಸುದ್ದಿಯಾಗಿ ಪ್ರಸಾರವಾಗುತ್ತಿತ್ತು. ಈಗಾಗಲೇ ವಿವಿಧ ದೇಶಗಳಿಂದ ಆಗಿರುವ ಆನ್‌ಲೈನ್ ಬುಕ್ಕಿಂಗ್ ಹಾಗೂ ಅದರ ನಂತರದ ತಯಾರಿಯ ಇಣುಕುನೋಟ ಸಾಹಸ ಬೇಡುವ ಯುವಜನರನ್ನು ಪ್ರಭಾವಿತಗೊಳಿಸುತ್ತಿತ್ತು.

* * *

ಕೆಲವು ದಿನಗಳ ಬಳಿಕ ಅವಿರತ್‌ನ ತಂದೆ ಹಾಗೂ ತಾಯಿ ವಿಶ್ವ ಪರ್ಯಟನೆಯಿಂದ ವಾಪಸ್ಸಾಗಿ, ತಮ್ಮ ಆಪ್ತರಿಗಾಗಿ ಆತ್ಮೀಯ ಭೋಜನಕೂಟ ಏರ್ಪಡಿಸಿದ್ದರು. ಆಗಮಿಸಿದವರನ್ನು ಸ್ವಾಗತಿಸಲು ಅಲಕಾದೇವಿ ಹಾಗೂ ಸುಪ್ರಜಾ ಅಲಂಕರಿಸಿಕೊಂಡು ತಾಯಿ–ಮಗಳಂತೆ ಪ್ರವೇಶದ್ವಾರದಲ್ಲೇ ಸುಗಂಧ ದ್ರವ್ಯದ ಸಿಂಪರಣೆಗೆ ನಿಂತಿದ್ದು ಎಲ್ಲರ ಗಮನ ಸೆಳೆದಿತ್ತು. ತದನಂತರ ಅವಿರತ್ ಹಾಗೂ ಹನ್ನಾ ಅವರ ನಾಗರಿಕ ನೋಂದಣಿ ಗುರುತನ್ನು ಅಧಿಕೃತವಾಗಿ ವಿವಾಹಿತರ ಪಟ್ಟಿಗೆ ಸೇರಿಸಲಾಗಿತ್ತು.

ಹನ್ನಾ ಹಾಗೂ ಅವಿರತ್ 'ವಿಶ್ವ ಚಂದ್ರನೆಡೆಗೆ ಪ್ರವಾಸ ಕೇಂದ್ರಕ್ಕೆ' ಪ್ರಯಾಣ ಬೆಳೆಸಲು ಸಜ್ಜಾಗತೊಡಗಿದ್ದರು. ತಮ್ಮ ಅನುಪಸ್ಥಿತಿಯಲ್ಲಿ ಪೂರ್ವ ನಿರ್ಧಾರಿತವಾದಂತೆ ಮಾಮ್ ಅಲಕಾದೇವಿ ಹಾಗೂ ಸುಪ್ರಜಾ ರೊಬೋ ಮರಿಯ ಕಾರ್ಯಕ್ರಮಗಳನ್ನು ಆಯೋಜನೆ ಮಾಡಿ ನಿರ್ದೇಶನ ನೀಡಿದಾಗ ಮನೆಯ ಬಹುಪಾಲು ಜವಾಬ್ದಾರಿ ಕಳೆದಂತೆ ನಿರಾಳವೆನಿಸಿತ್ತು. ಚೆಕ್‌ಲಿಸ್ಟ್‌ನಲ್ಲಿ ಇರುವಂತೆ ತಮ್ಮ ವಸ್ತುಗಳನ್ನು ಪ್ಯಾಕ್ ಮಾಡಲಾಗಿರುವುದನ್ನು ಖಾತರಿಪಡಿಸಿಕೊಂಡ ಬಳಿಕ ಅವರಿಬ್ಬರೂ ಮನೆಮಂದಿಗೆ ವಿದಾಯ ಹೇಳಿ ವಿಮಾನ ನಿಲ್ದಾಣದೆಡೆ ಸಾಗಿದ್ದರು.

ಟ್ರಾಫಿಕ್ ಸಿಗ್ನಲ್ ಇರುವೆ ಒಂದೆಡೆ ವಾಹನ ನಿಂತಾಗ ಯುವಕನೋರ್ವ ಮಿನಿ ನಕ್ಷತ್ರಗಳಂತೆ ಹೊಳೆಯುವ ಬೆಳಕನ್ನು ಬಲೂನಿನಲ್ಲಿ ಹಿಡಿದುಕೊಂಡು ಮಾರಾಟಕ್ಕೆ ನಿಂತಿರುವುದು ಕಾಣಿಸಿತ್ತು. ಈ ಮೊದಲಾಗಿದ್ದರೆ ಹನ್ನಾ ಅವನನ್ನು ತಡೆದು 'ಪಿಕ್‌ಅಪ್' ವಾಹನದಲ್ಲಿ ನಿರಾಶ್ರಿತರ ಕೇಂದ್ರಕ್ಕೆ ಕಳುಹಿಸುತ್ತಿದ್ದಳೇನೋ. ಆದರೆ ಈಗ ಅವಳಿಗೆ ಬೆಳಕನ್ನು ಹಿಡಿದಿಟ್ಟ ಆ ಬಲೂನುಗಳನ್ನು ನೋಡಿದಾಗ ತಾನು ಮುಂದಿನ ದಿನಗಳಲ್ಲಿ ವೀಕ್ಷಿಸುವ ದೃಶ್ಯಗಳಿಗೆ ಮುನ್ಸೂಚನೆಯಂತೆ ತೋರಿತ್ತು.

ಏರ್‌ಟ್ಯಾಕ್ಸಿಯಲ್ಲಿ ಸಾಗುವಾಗ ಕೆಳಗಿನ ದೃಶ್ಯಗಳ ಪಕ್ಷಿನೋಟ ದೊರಕಿಸುವುದಕ್ಕೂ ಮಿಗಿಲಾಗಿ ಭೂಮಿಯ ಪ್ರಭಾವಳಿಯ ಆಚೆಗಿನ ವಿಶಾಲ ಆಕಾಶ ಹಾಗೂ ಭೂಮಿಯ ವಿಹಂಗಮ ನೋಟ ನೀಡುವ ಅನುಭವ ಅನನ್ಯವಾದುದು. ತಳವಿಲ್ಲದ ವಿಶ್ವದ ತುಣುಕು ಅನಾವರಣಗೊಳಿಸುವ ಹಾಗೂ ಅಸೀಮತೆಗೆ ತೆರೆದುಕೊಳ್ಳುವ ಮುಕ್ತತೆ ಅವಳಲ್ಲಿ ಕಾತುರದ ಜೊತೆಗೆ ಅಮಿತವಾದ ಸಂತೋಷದ ಅನುಭೂತಿಯನ್ನು ಮೂಡಿಸಿತ್ತು.

**ಮುಗಿಯಿತು**

ಪ್ರತಿಕ್ರಿಯೆಗಳಿಗೆ ಸ್ವಾಗತ:
**feedback@sudha.co.in**